

بِسۡمِ اللّٰہِ الرَّحۡمٰنِ الرَّحِیۡمِ

# ನೀವು ನಿಮ್ಮ ಮಾತು ಮತ್ತು ಕೃತಿಗಳಲ್ಲಿ ಸತ್ಯಸಂಧತೆಯನ್ನು ಕಾಪಾಡಿರಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **10–06–2016** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಈ ಕೆಳಗಿನ ಪವಿತ್ರ ಖುರ್‌ಆನ್ ವಚನ ತಿಲಾವತ್ ಮಾಡಿದರು:*

**ಯಾ ಅಯ್ಯುಹಲ್ಲಝೀನ ಆಮನೂ ಕುತಿಬ ಅಲೈಕುಮುಸ್ಸಿಯಾಮು ಕಮಾ ಕುತಿಬ ಅಲಲ್ಲಝೀನ ಮಿನ್ ಖಬ್‌ಲಿಕುಮ್ ಲಅಲ್ಲಕುಮ್ ತತ್ತಖೂನ್.**

ಓ ವಿಶ್ವಾಸಿಗಳೇ, ನಿಮ್ಮ ಪೂರ್ವಜರಿಗೆ ವಿಧಿಸಲಾದಂತೆ ನಿಮಗೆ ಸಹ ಉಪವಾಸ ವ್ರತವನ್ನು ವಿಧಿಸಲಾಗಿದೆ – ನೀವು (ನೈತಿಕ ಮತ್ತು ಆಧ್ಯಾತ್ಮಿಕ ನ್ಯೂನತೆಗಳಿಂದ ಸುರಕ್ಷಿತರಾಗುವಂತೆ) ದೋಷಬಾಧೆಯ ಬಗ್ಗೆ ಜಾಗರೂಕರಾಗಲಿಕ್ಕೋಸ್ಕರ. (ಪವಿತ್ರ ಖುರ್‌ಆನ್ 2: 184).

ಪವಿತ್ರ ಖುರ್‌ಆನಿನ ಈ ವಚನದಲ್ಲಿ ಅಲ್ಲಾಹನು ಎಂತಹ ಒಂದು ವಿಷಯದ ಕಡೆಗೆ ನಮ್ಮ ಗಮನ ಸೆಳೆದಿದ್ದಾನೆಂದರೆ ಅದು ನಮ್ಮ ಇಹಲೋಕ ಜೀವಿತವನ್ನೂ ಪರಲೋಕ ಜೀವಿತವನ್ನೂ ಸರಿಪಡಿಸುವಂತಹದಾಗಿದೆ. ಅದು **ಲಅಲ್ಲಕುಮ್ ತತ್ತಖೂನ್** ಎನ್ನುವುದಾಗಿದೆ. ಉಪವಾಸವನ್ನು ಕಡ್ಡಾಯಕರ್ಮವನ್ನಾಗಿ ಮಾಡಿದುದರ ಮಹತ್ವ ಅದು ಇಸ್ಲಾಮ್‌ಗಿಂತ ಮೊದಲಿನ ಧರ್ಮಗಳಲ್ಲಿ ಸಹ ನಿಶ್ಚಯಗೊಳಿಸಲಾಗಿತ್ತು ಎಂಬುದರಲ್ಲಿ ಅಲ್ಲ. ಅದರ ಮಹತ್ವ ಇರುವುದು ನೀವು ತಖ್ವ (ಭಯಭಕ್ತಿ) ಅವಲಂಬಿಸಬೇಕು ಮತ್ತು ಕೆಟ್ಟ ಕೆಲಸಗಳಿಂದ ನಿಮ್ಮನ್ನು ರಕ್ಷಿಸಿಕೊಳ್ಳಬೇಕು ಎನ್ನುವುದರಲ್ಲಿದೆ. ಅಲ್ಲಾಹನಿಗೆ ನೀವು ಕೇವಲ ಹಸಿವೆಯಿಂದಿರುವ ಆವಶ್ಯಕತೆಯಿಲ್ಲ ಎಂದು ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿರುವರು. ವ್ರತಾನುಷ್ಠಾನದ ನಿಜವಾದ ಉದ್ದೇಶವು ನಿಮ್ಮಲ್ಲಿ ತಖ್ವ ಉಂಟಾಗಬೇಕು ಎನ್ನುವುದಾಗಿದೆ. ತರಬೇತಿ ನೀಡುವ ಒಂದು ತಿಂಗಳನ್ನು ಒದಗಿಸಲಾಗಿದೆ. ಈ ತಿಂಗಳಲ್ಲಿ ನಿಮ್ಮ ತಖ್ವದ ಮಟ್ಟವನ್ನು ವರ್ಧಿಸಲು ಪ್ರಯತ್ನಿಸಬೇಕು. ಈ ತಖ್ವ ನಿಮ್ಮ ಸತ್ಕರ್ಮಗಳ ಮಟ್ಟವನ್ನು ಉನ್ನತಗೊಳಿಸುವುದರಿಂದ ಅದು ನಿಮ್ಮನ್ನು ಸ್ಥಿರವಾದ ಸತ್ಕರ್ಮಗಳಲ್ಲಿ ನೆಲೆನಿಲ್ಲಿಸುವುದು. ಅದು ನಿಮಗೆ ಅಲ್ಲಾಹನ ಸಾಮೀಪ್ಯ ನೀಡುವುದು ಮತ್ತು ಅದೇ ರೀತಿ ನೀವು ಹಿಂದೆ ಮಾಡಿದ ಪಾಪದೋಷಗಳು ಕ್ಷಮಿಸುವಂತಾಗುವುದು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಒಮ್ಮೆ ಹೇಳಿದರು. ಸತ್ಯವಿಶ್ವಾಸಿಯಾದ ಓರ್ವನು ರಮಝಾನ್ ತಿಂಗಳ ಉಪವಾಸ ಅನುಷ್ಠಿಸಿದರೆ, ತನ್ನ ಆತ್ಮಪರಿಶೋಧನೆ ಮಾಡುತ್ತಾ ಉಪವಾಸ ಅನುಷ್ಠಿಸಿದರೆ, ಅವನು ಹಿಂದೆ ಮಾಡಿದ ಪಾಪಕೃತ್ಯಗಳು ಕ್ಷಮಿಸಲ್ಪಡುವುವು. ಆದುದರಿಂದ ರಮಝಾನ್ ತಿಂಗಳಲ್ಲಿ ಹಿಂದೆ ಮಾಡಿದ ಪಾಪಕೃತ್ಯಗಳು ಕ್ಷಮಿಸಲ್ಪಟ್ಟ ಸತ್ಯವಿಶ್ವಾಸಿ, ತಖ್ವವನ್ನು ಅವಲಂಬಿಸಿ ಅದರಲ್ಲಿ ಸ್ಥಿರವಾಗಿ ನೆಲೆ ನಿಂತರೆ ಅಂತಹ ವ್ಯಕ್ತಿ ರಮಝಾನ್‌ನಲ್ಲಿ ಸಾಧಿಸಬೇಕಾದ ಉದ್ದೇಶಲಕ್ಷ್ಯವನ್ನು ಗಳಿಸುವುದರಲ್ಲಿ ಜಯಶಾಲಿಯಾದನು. ಅವನು ತನ್ನ ಜೀವಿತದ ಉದ್ದೇಶಲಕ್ಷ್ಯವನ್ನು ಗಳಿಸಿದನು. ತಖ್ವದಿಂದ ದೊರಕುವ ಲಾಭಗಳ ಬಗ್ಗೆ ಪವಿತ್ರ ಖುರ್‌ಆನ್‌ನಲ್ಲಿ ವಿವರಿಸಲಾಗಿದೆ. ಅವುಗಳಲ್ಲಿ ಒಂದು ಅಲ್ಲಾಹನು ಸ್ವತಃ ಹೀಗೆ ಹೇಳಿದ್ದಾನೆ: **ಫತ್ತಖುಲ್ಲಾಹ ಯಾ ಉಲಿಲ್ ಅಲ್‌ಬಾಬ್ ಲಅಲ್ಲಕುಮ್ ತುಫ್‌ಲಿಹೂನ್.** ಓ ಬುದ್ಧಿಶಾಲಿಗಳೇ ನೀವು ತಖ್ವವನ್ನು ಅವಲಂಬಿಸಿರಿ. ಆ ಮೂಲಕ ನೀವು ಜಯಗಳಿಸುವವರಾಗಿರಿ. ನೀವು ಉದ್ದೇಶ ಸಿದ್ಧಿಯನ್ನು ಪಡೆದವರಾಗುವಿರಿ. ಜಯಗಳಿಸಲು ಬಯಸದವನು ಯಾರಿದ್ದಾನೆ. ಲೋಕದಲ್ಲಿ ಗಳಿಸಿದ ಜಯಗಳು ಇಲ್ಲಿಯೇ ಉಳಿದು ಬಿಡುತ್ತವೆ. ನಿಜವಾದ ಜಯ ಅಂದರೆ, ಈ ಲೋಕದಲ್ಲಿ ಸಿಗುವ ಜಯ ಮತ್ತು ಅದರೊಂದಿಗೆ ಪರಲೋಕದ ಜಯವೂ ಆಗಿದೆ. ಅಲ್ಲಾಹನು ಹೇಳುವುದೇನೆಂದರೆ ನೀವು ಬುದ್ಧಿವಂತರಾಗಿದ್ದಲ್ಲಿ ಆಲಿಸಿರಿ ತಖ್ವದಲ್ಲಿ ಸ್ಥಿರವಾಗಿ ಇರುವುದರಿಂದಲೇ ಜಯ ಲಭಿಸುವುದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ತಖ್ವ ಎಂಬುದು ಚಿಕ್ಕ ವಸ್ತುವೇನೂ ಅಲ್ಲ. ಮನುಷ್ಯನ ಪ್ರತಿಯೊಂದು ಆಂತರಿಕ ಶಕ್ತಿ ಸಾಮರ್ಥ್ಯಗಳ ಮೇಲೆ ಜಯವನ್ನು ಗಳಿಸಿ ಎಲ್ಲ ಶೈತಾನರನ್ನು ಅದರ ಮೂಲಕ ಎದುರಿಸಬೇಕಾಗಿದೆ. ಈ ಎಲ್ಲ ಶಕ್ತಿ ಸಾಮರ್ಥ್ಯಗಳು **ನಫ್ಸೇ ಅಮ್ಮಾರ** (ದುಷ್ಪ್ರೇರಕ ಆತ್ಮದ) ರೂಪದಲ್ಲಿ ಮನುಷ್ಯನೊಳಗಿರುವ ಶೈತಾನನಾಗಿದ್ದಾನೆ. ಜ್ಞಾನ ಮತ್ತು ಬುದ್ಧಿಯನ್ನು ಕೆಟ್ಟ ರೀತಿಯಲ್ಲಿ ಉಪಯೋಗಿಸಿದರೆ ಅವು ಶೈತಾನ್ ಆಗುತ್ತವೆ. ಮುತ್ತಖೀ (ಭಯಭಕ್ತಿಯುಳ್ಳವನು) ತನ್ನ ಎಲ್ಲ ಶಕ್ತಿ ಸಾಮರ್ಥ್ಯಗಳನ್ನು ಸರಿಯಾಗಿ ಬಳಸಬೇಕಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: ತಖ್ವದ ವಿಷಯ ಸೂಕ್ಷ್ಮವಾಗಿದೆ. ಅದನ್ನು ಗಳಿಸಲು ಪ್ರಯತ್ನಿಸಿರಿ. ಅಲ್ಲಾಹನ ಮಹತ್ವಪೂರ್ಣ ಸ್ಥಾನವನ್ನು ಹೃದಯದಲ್ಲಿ ಸ್ಥಾಪಿಸಿರಿ. ಯಾರದಾದರೂ ಅನುಷ್ಠಾನ ಕರ್ಮಗಳಲ್ಲಿ ಸ್ವಲ್ಪವಾದರೂ ತೋರಿಕೆ (ರಿಯಾ) ಇದ್ದರೆ ಅಲ್ಲಾಹನು ಅವನ ಕರ್ಮಗಳನ್ನು ಅವನ ಮುಖಕ್ಕೆ ಎಸೆಯುತ್ತಾನೆ. ಮುತ್ತಖಿ ಆಗುವುದು ಕಷ್ಟಕರವಾಗಿದೆ. ಉದಾಹರಣೆಗೆ ಯಾರಾದರೂ ನಿನ್ನೊಡನೆ "ನೀನು ಲೇಖನಿ ಕದ್ದಿರುವೆ" ಎಂದು ಹೇಳಿದರೆ ನಿನಗೆ ಸಿಟ್ಟು ಬರುವುದು ಏಕೆ? ನೀನು ಆತ್ಮ ನಿಯಂತ್ರಣ ಮಾಡಿರುವುದು ಅಲ್ಲಾಹನಿಗೋಸ್ಕರ ಮಾತ್ರವಾಗಿದೆ. ಈ ಕೋಪ ಬಂದದ್ದು ಸತ್ಯವಲ್ಲದ ಮಾತಿನ ಕಾರಣದಿಂದಾಗಿದೆ. ಒಬ್ಬ ಮನುಷ್ಯನಿಗೆ ಬಹಳ ಮೃತ್ಯುಗಳು ವಾಸ್ತವಿಕವಾಗಿ ಸಂಭವಿಸುವ ತನಕ ಅವನು ಮುತ್ತಖಿ ಆಗಲಾರ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: ಅದ್ಭುತ ಕೃತ್ಯಗಳು ಮತ್ತು ಇಲ್‌ಹಾಮ್‌ಗಳು ಸಹ ತಖ್ವದ ಅನುಬಂಧಗಳಾಗಿವೆ. ಮೂಲ ವಸ್ತು ತಖ್ವ ಆಗಿದೆ. ಆದುದರಿಂದ ಇಲ್‌ಹಾಮ್ ಮತ್ತು ಸ್ವಪ್ನಗಳನ್ನು ಹಿಂಬಾಲಿಸುವವರಾಗಬೇಡಿರಿ. ತಖ್ವ ಗಳಿಸುವುದನ್ನು ಹಿಂಬಾಲಿಸಿರಿ. ತಖ್ವ ಹೊಂದಿರುವ ಮುತ್ತಖಿಯ ಇಲ್‌ಹಾಮ್‌ಗಳು ಸತ್ಯವಾದವುಗಳಾಗಿವೆ. ಆದರೆ ತಖ್ವ ಇಲ್ಲದವನ ಇಲ್‌ಹಾಮ್‌ಗಳು ಸಹ ವಿಶ್ವಾಸಾರ್ಹವಾಗಿರುವುದಿಲ್ಲ. ಅವುಗಳಲ್ಲಿ ಶೈತಾನನ

ಪಾಲಿರುತ್ತದೆ. ಪವಿತ್ರ ಖುರ್‌ಆನ್‌ನಲ್ಲಿ ತಖ್ವದ ಸೂಕ್ಷ್ಮ ಮಾರ್ಗಗಳನ್ನು ಕಲಿಸಲಾಗಿದೆ. ಪರಿಪೂರ್ಣ ಪೈಗಂಬರರಿಗೆ ಪರಿಪೂರ್ಣ ಅನುಯಾಯಿಗಳ ಜಮಾಅತ್ ಇರಬೇಕು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು **ಖಾತಮುನ್ನಬಿಯ್ಯೀನ್** ಆಗಿದ್ದುದರಿಂದ ಅವರಲ್ಲಿ ನುಬುವ್ವತ್‌ಗೆ ಸಂಬಂಧಿಸಿದ ಪರಿಪೂರ್ಣತೆಗಳು ಪೂರ್ಣಗೊಳಿಸಲ್ಪಟ್ಟವು. ಅಲ್ಲಾಹನ ಸಂಪ್ರೀತಿಯನ್ನು ಇಚ್ಛಿಸುವವನು ಮತ್ತು ಅದ್ಭುತ ಕೃತ್ಯಗಳನ್ನು ಕಾಣಲು ಬಯಸುವವನು, ಅಸಾಧಾರಣ ಸಂಭವಗಳನ್ನು ನೋಡಲು ಇಚ್ಛಿಸುವವನು, ತನ್ನ ಜೀವಿತವನ್ನು ಅಸಾಧಾರಣವಾಗಿ ರೂಪಿಸಬೇಕು. ಈ ಕ್ರಾಂತಿಯನ್ನು ನಮ್ಮಲ್ಲಿ ಉಂಟುಮಾಡುವ ಆವಶ್ಯಕತೆ ಇದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ನಂಬುವವರಾಗಿದ್ದರೆ, ಅವರ ಅನುಯಾಯಿಗಳ ಸಮುದಾಯಕ್ಕೆ ಸೇರಿದವರಾಗಿದ್ದರೆ, ಅವರ ಮಾದರಿ ಜೀವಿತ ನಮಗೋಸ್ಕರವಾಗಿದೆ. ಅದಕ್ಕೋಸ್ಕರ ಅಲ್ಲಾಹನೊಂದಿಗೆ ಸಂಬಂಧವನ್ನು ವರ್ಧಿಸಬೇಕು ಮತ್ತು ವಾಸ್ತವಿಕ ತಖ್ವ ನಮ್ಮಲ್ಲಿ ಉಂಟಾಗಬೇಕು.

ಪ್ರತಿಯೊಂದು ಒಳಿತಿನ ಬೇರು ತಖ್ವ ಆಗಿದೆ ಎಂಬುದನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ನೀವು ತಖ್ವವನ್ನು ಹೊಂದಿರಿ. ತಖ್ವ ಪ್ರತಿಯೊಂದರ ಬೇರು ಆಗಿದೆ. ತಖ್ವದ ಅರ್ಥವೇನೆಂದರೆ ಪ್ರತಿಯೊಂದು ಸೂಕ್ಷ್ಮಾತಿಸೂಕ್ಷ್ಮ ಪಾಪದ ನಾಡಿಯಿಂದ ರಕ್ಷಣೆ ಪಡೆಯುವುದಾಗಿದೆ. ಯಾವುದರಲ್ಲಿ ಕೆಡುಕಿನ ಬಗ್ಗೆ ಒಂದು ಸಣ್ಣ ಸಂಶಯ ಸಹ ಇದ್ದರೂ ಅದರಿಂದ ಸಹ ದೂರ ಸರಿಯುವುದೇ ತಖ್ವ ಆಗಿದೆ. ಕೇವಲ ಬಾಹ್ಯವಾಗಿ ಕಾಣಿಸುವ ಕೆಡುಕುಗಳಿಂದ ಮಾತ್ರ ರಕ್ಷಿಸಿಕೊಳ್ಳುವುದು ಮಾತ್ರ ತಖ್ವವಲ್ಲ. ಯಾವುದಾದರೊಂದರಲ್ಲಿ ಕೆಡುಕು ಇರಬಹುದು ಎಂಬ ಸಂಶಯವಿದ್ದರೆ ಅದರಿಂದಲೂ ತನ್ನನ್ನು ರಕ್ಷಿಸಿಕೊಳ್ಳುವುದೇ ತಖ್ವ ಆಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಹೃದಯದ ಕಾಲುವೆಯಿಂದ ಚಿಕ್ಕ ಚಿಕ್ಕ ಕಾಲುವೆಗಳು ಹೊರಬರುತ್ತವೆ. ಉದಾಹರಣೆಗೆ ನಾಲಗೆ ಮೊದಲಾದುವು. ಯಾರದಾದರೂ ನಾಲಗೆ ಕೊಳಕಾಗಿದ್ದರೆ ಅವನು ಉಪವಾಸ ಅನುಷ್ಠಿಸುವಾಗ ಸಹ ಜಗಳ ಮತ್ತು ಬೈಯ್ಯುವುದನ್ನು ಬಿಟ್ಟು ಬಿಡುವುದಿಲ್ಲವಾದರೆ, ಅಥವಾ ಅವನ ಕೈಗಳಿಂದ ಕೆಟ್ಟ ಕೆಲಸಗಳು ಉಂಟಾಗುವುದಾದರೆ, ನೀವು ತಿಳಿದುಕೊಳ್ಳಿರಿ ಅವನ ಹೃದಯ ಶುದ್ಧವಾಗಿಲ್ಲ, ಅವನು ತಖ್ವದಿಂದ ದೂರ ಸರಿದವನಾಗಿದ್ದಾನೆ ಎಂದು.

ನಿರಾಡಂಬರವಾಗಿ ಸರಳ ಜೀವನವನ್ನು ಪಾಲಿಸುವ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ: ನಿರಾಡಂಬರವಾಗಿಯೂ ಮಿಸ್‌ಕೀನ್ ಆಗಿಯೂ ಜೀವಿಸುವುದು ತಖ್ವದ ಶರತ್ತಾಗಿದೆ. ಅನಾವಶ್ಯಕವಾದ ಕೋಪವನ್ನು ನಿಯಂತ್ರಿಸಬೇಕಾದುದು ಸಹ ತಖ್ವದ ಒಂದು ಭಾಗವಾಗಿದೆ. ನಿಷ್ಕಾರಣವಾದ ಕೋಪವನ್ನು ತಡೆಯಬೇಕು. ಸರಿಯಾದ ಸಂದರ್ಭದಲ್ಲಿ ಸರಿಯಾದ ಸ್ಥಳದಲ್ಲಿ ಕೋಪವನ್ನು ಪ್ರಕಟಿಸುವುದು ಧರ್ಮಬದ್ಧವಾಗಿದೆ. ಆದರೆ ನಿಷ್ಕಾರಣ ಕೋಪ, ಚಿಕ್ಕ ಚಿಕ್ಕ ವಿಷಯಗಳ ಬಗ್ಗೆ ಕೋಪ, ಜಗಳ ಮೊದಲಾದುವುಗಳಿಂದ ನಿಮ್ಮನ್ನು ರಕ್ಷಿಸಿಕೊಳ್ಳಿರಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ದೊಡ್ಡ ದೊಡ್ಡ ಜ್ಞಾನಿಗಳಿಗೆ ಮತ್ತು ಸತ್ಯಸಂಧರಿಗೆ ಕೊನೆಯ ಹಂತವಿರುವುದು ಕೋಪದಿಂದ ರಕ್ಷಿಸಿಕೊಳ್ಳುವುದೇ ಆಗಿದೆ. ನನ್ನ ಜಮಾಅತಿನ ಜನರು ಪರಸ್ಪರ ದೊಡ್ಡವರು ಮತ್ತು ಚಿಕ್ಕವರು ಎಂದು ಗಣಿಸಿಕೊಳ್ಳುವುದನ್ನು ನಾನು ಇಚ್ಛಿಸುವುದಿಲ್ಲ. ಒಬ್ಬರು ಇನ್ನೊಬ್ಬರೊಂದಿಗೆ ಅಹಂಕಾರದಿಂದ ವರ್ತಿಸುವುದನ್ನು ಮತ್ತು ತತ್ಸಾರ ದೃಷ್ಟಿಯಿಂದ ನೋಡುವುದನ್ನು ನಾನು ಇಚ್ಛಿಸುವುದಿಲ್ಲ. ಯಾರು ದೊಡ್ಡವನು ಯಾರು ಚಿಕ್ಕವನು ಎನ್ನುವುದು ಅಲ್ಲಾಹನಿಗೆ ತಿಳಿದಿದೆ. ಇದೊಂದು ರೀತಿಯ ಹೀನೈಸುವಿಕೆ ಆಗಿದೆ. ಈ ಹೀನೈಸುವಿಕೆ ಬೀಜದ ಹಾಗೆ ಮೊಳಕೆಯೊಡೆದು ಬೆಳೆದು ಅವನ ನಾಶಕ್ಕೆ ಕಾರಣವಾಗುವ ಭಯವಿರುತ್ತದೆ. ಕೆಲವರು ದೊಡ್ಡ ಜನರನ್ನು ಕಾಣುವಾಗ ಆದರ ಭಾವದಿಂದ ವರ್ತಿಸುತ್ತಾರೆ. ಆದರೆ ದೊಡ್ಡವನು ಯಾರೆಂದರೆ ಬಡವನ ಮಾತನ್ನು ಶ್ರದ್ಧೆಯಿಂದ ಆಲಿಸುವವನಾಗಿದ್ದಾನೆ. ಅವನ ಮಾತಿಗೆ ಗೌರವ ನೀಡುವವನಾಗಿದ್ದಾನೆ. ಹೃದಯಕ್ಕೆ ನೋವುಂಟುಮಾಡುವಂತಹ ಧಿಕ್ಕಾರ ಭಾವದ ಮಾತನ್ನಾಡಬಾರದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮುತ್ತಖಿ ಯಾರೆಂದು ವಿವರಿಸುತ್ತಾ ಹೇಳುತ್ತಾರೆ: ಅಲ್ಲಾಹನ ವಚನಗಳಿಂದ ತಿಳಿಯುವುದೇನೆಂದರೆ ಮೃದು ಹೃದಯಿಯಾಗಿ ನಿರಾಡಂಬರದಿಂದ ಜೀವಿಸುವವರೇ ಮುತ್ತಖಿಗಳು. ಅವರು ಅಹಂಭಾವದಿಂದ ಮಾತನಾಡುವುದಿಲ್ಲ. ಅವರ ಮಾತು ಹೇಗಿರುತ್ತದೆ ಎಂದರೆ ಚಿಕ್ಕವರು ದೊಡ್ಡವರೊಂದಿಗೆ ಮಾತನಾಡುವ ರೀತಿಯಲ್ಲಿರುತ್ತದೆ. ನಾವು ಪ್ರತಿಯೊಂದು ಸ್ಥಿತಿಯಲ್ಲೂ ನಮಗೆ ಜಯ ದೊರಕುವ ರೀತಿಯಲ್ಲಿ ಕೆಲಸಮಾಡಬೇಕಾಗಿದೆ. ಅಲ್ಲಾಹನು ಯಾರದಾದರೂ ಪಕ್ಷಪಾತಿಯಲ್ಲ ಅವನು ವಿಶಿಷ್ಟವಾಗಿ ತಖ್ವವನ್ನು ಇಚ್ಛಿಸುತ್ತಾನೆ. ಯಾರು ತಖ್ವವನ್ನು ಅವಲಂಬಿಸುತ್ತಾರೋ ಅವರು ಉನ್ನತ ಸ್ಥಾನಕ್ಕೆ ತಲಪುವರು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಸತ್ಯವಾದ ವಿವೇಕ ಸತ್ಯವಾದ ಬುದ್ಧಿಶಾಲಿತ್ವ ಹೇಗೆ ಗಳಿಸಬಹುದು ಎನ್ನುವುದರ ಬಗ್ಗೆ ಹೀಗೆ ಹೇಳುತ್ತಾರೆ: ಸತ್ಯವಾದ ವಿವೇಕ, ಸತ್ಯವಾದ ಬುದ್ಧಿಶಾಲಿತ್ವ ಅಲ್ಲಾಹನ ಕಡೆಗೆ ತಿರುಗದೆ ಲಭಿಸಲಾರದು. ಇದೇ ಕಾರಣದಿಂದ ಹೀಗೆ ಹೇಳಲಾಗಿದೆ: ಸತ್ಯವಿಶ್ವಾಸಿಯ ಬುದ್ಧಿಶಾಲಿತ್ವದ ಬಗ್ಗೆ ಭಯಪಡಿರಿ. ಏಕೆಂದರೆ ಸತ್ಯವಿಶ್ವಾಸಿ ಅಲ್ಲಾಹನ ಪ್ರಕಾಶದ ಮೂಲಕ ನೋಡುತ್ತಾನೆ. ತಖ್ವವನ್ನು ಹೊಂದದಿದ್ದರೆ ಸರಿಯಾದ ಬುದ್ಧಿ ಸಹ ಲಭಿಸಲಾರದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅಹ್ಮದಿಯಾ ಜಮಾಅತ್‌ನಲ್ಲಿ ಸೇರಿ ಇಸ್ಲಾಮ್‌ಗೋಸ್ಕರ ಸೇವೆ ಮಾಡಲು ಇಚ್ಛಿಸುವಿರಾದರೆ ಮೊತ್ತಮೊದಲು ನೀವು ತಖ್ವ ಮತ್ತು ಪರಿಶುದ್ಧಿಯನ್ನು ಹೊಂದಬೇಕು. ಕೇವಲ ಮಾತುಗಳ ಮೂಲಕ ಇಸ್ಲಾಮಿಗೆ ಸೇವೆ ಸಲ್ಲಿಸಲಾಗದು. ತಖ್ವ ಮತ್ತು ತ್ವಹಾರತ್ (ಪರಿಶುದ್ಧಿ) ಹೊಂದಬೇಕಾದುದು ಅನಿವಾರ್ಯವಾಗಿದೆ.

ನಾನು ಪುನಃ ನಿಮ್ಮ ಗಮನಕ್ಕೆ ತರಲು ಬಯಸುತ್ತೇನೆ ಪ್ರಥಮ ಉದ್ದೇಶ ಲಕ್ಷ್ಯದ ಕಡೆಗೆ ನಿಮ್ಮ ಗಮನ ಸೆಳೆಯುತ್ತೇನೆ. ಅದು ಅಲ್ಲಾಹನ ಆಜ್ಞೆ **ಸಾಬಿರೂ ವ ರಾಬಿತೂ** ನೀವು ಸ್ಥೈರ್ಯದೋರಿರಿ ಮತ್ತು ಸರಹದ್ದುಗಳನ್ನು ಕಾವಲುಗಾಯಿರಿ ಎಂಬುದರ ಬಗ್ಗೆಯಾಗಿದೆ.

ದೇಶದ ಗಡಿ ಪ್ರದೇಶದಲ್ಲಿ ಕಾವಲುಗಾರರಾದ ಕುದುರೆ ಸವಾರರು ಶತ್ರುಗಳು ದೇಶದ ಗಡಿ ದಾಟಿ ಬರದಂತೆ ಕಾವಲು ಕಾಯುವ ಹಾಗೆ ನೀವು ಸಹ ಸನ್ನದ್ಧರಾಗಿರಬೇಕು. **ಸಾಬಿರೂ ವ ರಾಬಿತೂ** ಇದರ ವ್ಯಾಖ್ಯಾನ ಮಾಡುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ದೇಶದ ಸರಹದ್ದುಗಳನ್ನು ರಕ್ಷಿಸಲು ಸೈನ್ಯವನ್ನು ನಿಲ್ಲಿಸಿ ಶತ್ರುಗಳು ದೇಶವನ್ನು ಪ್ರವೇಶಿಸದಂತೆ ಮಾಡಲಾಗುತ್ತಿದೆ. ಇದೇ ರೀತಿ ನೀವು ಸಹ ಗಡಿ ಕಾವಲುಗಾರರಾದ ಸೈನಿಕರ ಹಾಗೆ ಆಗಿರಿ. ಶತ್ರುಗಳು ಗಡಿದಾಟಿ ಇಸ್ಲಾಮಿಗೆ ಹಾನಿಯುಂಟುಮಾಡುವಂತಾಗದಿರಲಿ. ನಾನು ಇದರ ಮೊದಲು ಸಹ ಹೇಳಿದ್ದೇನೆ ನೀವು ಇಸ್ಲಾಮಿಗೆ ಸಹಾಯಕರಾಗಲು ಮತ್ತು ಸೇವೆ ಸಲ್ಲಿಸುವವರಾಗಲು ಬಯಸುವುದಾದರೆ ಮೊತ್ತಮೊದಲು ನೀವು ತಖ್ವಾ ಮತ್ತು ಪರಿಶುದ್ಧಿಯನ್ನು ಹೊಂದಿರಿ. ಆ ಮೂಲಕ ನೀವು ಅಲ್ಲಾಹನ ಸುಭದ್ರವಾದ ಕೋಟೆಯೊಳಗೆ ಸುರಕ್ಷಿತರಾಗುವಿರಿ. ಆಗ ನೀವು ಸೇವೆಯ ಭಾಗ್ಯ ಮತ್ತು ಅರ್ಹತೆ ಪಡೆಯುವಿರಿ. ಅಲ್ಲಾಹನ ಅನುಗ್ರಹ ಯಾವಾಗಲೂ ಭಯಭಕ್ತಿಯುಳ್ಳವರ (ಮುತ್ತಖಿಗಳ) ಮತ್ತು ಸತ್ಯವಂತರ ಜೊತೆಗಿರುತ್ತದೆ. ನಿಮ್ಮ ಸ್ವಭಾವಗುಣಗಳು ಮತ್ತು ವರ್ತನೆಯ ರೀತಿಗಳಿಂದ ಇಸ್ಲಾಮಿಗೆ ಕಳಂಕವುಂಟಾಗದಿರಲಿ. ಕೆಟ್ಟ ಕೆಲಸ ಮಾಡುವವರಾದ ಮತ್ತು ಇಸ್ಲಾಮಿನ ಉಪದೇಶಗಳ ಪ್ರಕಾರ ಕರ್ಮಗಳನ್ನು ಮಾಡದವರಾದ ಮುಸ್ಲಿಮರಿಂದ ಇಸ್ಲಾಮಿಗೆ ಕಳಂಕವುಂಟಾಗುತ್ತದೆ. ಯಾವನಾದರೂ ಮುಸ್ಲಿಂ ಮದ್ಯ ಕುಡಿದು ಎಲ್ಲಿಯಾದರು ವಾಂತಿ ಮಾಡುತ್ತಾ, ಅವನ ಪಗಡಿ ಹೆಗಲಲ್ಲಿ ಇರುತ್ತದೆ, ಚರಂಡಿಗಳಲ್ಲಿ ಬೀಳುತ್ತಾ ತಿರುಗುತ್ತಾನೆ, ಪೋಲೀಸರಿಂದ ಒದೆಯಲ್ಪಡುತ್ತಾನೆ, ಹಿಂದುಗಳೂ ಕ್ರೈಸ್ತರೂ ಅವನನ್ನು ನೋಡಿ ನಗುತ್ತಾರೆ. ಶರೀಅತಿಗೆ ವಿರುದ್ಧವಾದ ಅವನ ಈ ವರ್ತನೆಯಿಂದ ಅವನು ಮಾತ್ರ ಅಪಹಾಸ್ಯ ಪಾತ್ರನಾಗುವುದಲ್ಲ, ಬದಲಾಗಿ ಅದರ ಪ್ರಭಾವ ಇಸ್ಲಾಮಿನ ಆತ್ಮದ ಮೇಲೆಯೂ ಉಂಟಾಗುತ್ತದೆ. ಆದುದರಿಂದ ನೀವು ನಿಮ್ಮ ನಡೆವಳಿಕೆಗಳನ್ನು ಸರಿಪಡಿಸಿಕೊಳ್ಳಿರಿ. ನಿಮ್ಮ ವರ್ತನೆಗಳಿಂದ ನಿಮ್ಮ ಮೇಲೆ – ವಾಸ್ತವಿಕವಾಗಿ ಇಸ್ಲಾಮಿನ ಮೇಲೆ – ಆಕ್ಷೇಪ ಉಂಟಾಗದಿರಲಿ.

ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬಿದುದು ಏಕೆಂದರೆ, ಧರ್ಮ ಬಿಗಡಾಯಿಸಿತ್ತು. ಇಸ್ಲಾಮಿನ ನೈಜ ಉಪದೇಶಗಳ ಪ್ರಕಾರ ಯಾರೂ ನಡೆಯುತ್ತಿರಲಿಲ್ಲ. ಇಸ್ಲಾಮಿನ ನೈಜ ತತ್ವಗಳ ಪ್ರಕಾರ ನಾವು ನಡೆಯಬೇಕಾದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬಬೇಕು ಎಂಬ ಕಾರಣಕ್ಕಾಗಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬಿದ್ದೇವೆ. ಆದರೆ ಅವರನ್ನು ನಂಬಿದ ನಂತರ ನಾವು ನಮ್ಮ ಕೆಟ್ಟಕೆಲಸಗಳನ್ನು ಬಿಟ್ಟಿದ್ದೇವೆಯೇ? ಸುಳ್ಳು ಹೇಳುವುದು ಎಂತಹ ಕೆಟ್ಟ ಕೆಲಸವೆಂದರೆ ಅದು ಬಾಹ್ಯವಾಗಿ ಸಾಮಾನ್ಯವಾಗಿ ತೋರುತ್ತದೆ. ಆದರೆ ಅದು ಬಹಳ ದೊಡ್ಡದಾಗಿದೆ. ನಾವು ವಾಸ್ತವಿಕವಾಗಿ ಪರಿಶೀಲಿಸುವುದಾದರೆ ಬಹುತೇಕ ಜನರು ಪ್ರಾಯಶಃ ಈ ಕೆಡುಕು ಮಾಡುವವರಾಗಿದ್ದಾರೆ. ಬೈಅತ್ ಮತ್ತು ತಖ್ವಾ ಆವಶ್ಯಪಡುವುದೇನೆಂದರೆ ನಾವು ಈ ಕೆಟ್ಟ ಕೆಲಸದಿಂದ ನಮ್ಮನ್ನು ರಕ್ಷಿಸಿಕೊಳ್ಳಬೇಕು. ಇಲ್ಲಿ ವಾಸಿಸುವ ಅಹ್ಮದಿಯರಲ್ಲಿ ಬಹಳ ಜನರು ಇಲ್ಲಿಗೆ ಬಂದಿರುವುದು ಧರ್ಮದ ಕಾರಣದಿಂದಾಗಿದೆ. ಅವರಿಗೆ ತಮ್ಮ ದೇಶದಲ್ಲಿ ತಮ್ಮ ಧರ್ಮ ಪ್ರಕಾರ ಅನುಷ್ಠಾನ ಕರ್ಮಗಳನ್ನು ಮಾಡುವ ಅನುಮತಿ ಇರಲಿಲ್ಲ. ತಮ್ಮ ಧರ್ಮದ ಬಗ್ಗೆ ಸ್ವತಂತ್ರರಾಗಿ ಬಹಿರಂಗ ಪಡಿಸುವ ಅನುಮತಿ ಇರಲಿಲ್ಲ. ಆದಕಾರಣ, ವಿಶಿಷ್ಟವಾಗಿ ಪಶ್ಚಿಮ ದೇಶದಲ್ಲಿ ವಾಸಿಸುವ ನಾವು ಬಹಳ ಜಾಗರೂಕರಾಗಿರಬೇಕು. ನಮ್ಮ ಯಾವುದೇ ಕೆಲಸ ಮತ್ತು ನಮ್ಮ ಮಾತು ನಮ್ಮನ್ನು ಸುಳ್ಳುಗಾರರು ಎಂದು ಸಾಬೀತುಪಡಿಸುವಂತಿರಬಾರದು. ನಾವು ತಪ್ಪಾದ ರೀತಿಯಲ್ಲಿ ಲಾಭ ಪಡೆಯುವವರಾಗಬಾರದು ಆದುದರಿಂದ ತಖ್ವದ ಮಟ್ಟವನ್ನು ತಮ್ಮ ಮುಂದಿರಿಸಿ ಪ್ರತಿಯೊಬ್ಬನು ತನ್ನನ್ನು ಪರಿಶೋಧಿಸಬೇಕಾದ ಆವಶ್ಯಕತೆಯಿದೆ.

ಅಲ್ಲಾಹನನ್ನು ಭಯಪಡುವ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಮನುಷ್ಯನು ತನ್ನ ಮಾತು ಮತ್ತು ಕೃತ್ಯ ಎಲ್ಲಿಯ ತನಕ ಒಂದು ಇನ್ನೊಂದರೊಂದಿಗೆ ಸಮವಾಗಿದೆ ಎಂದು ನೋಡುವುದರಲ್ಲಿ ಅಲ್ಲಾಹನ ಬಗ್ಗೆ ಭಯ ಅಡಕವಾಗಿದೆ. ಅವನು ಏನು ಹೇಳುತ್ತಿದ್ದಾನೆ ಮತ್ತು ಏನು ಮಾಡುತ್ತಿದ್ದಾನೆ ಎಂದು ನೋಡಬೇಕು. ಅವು ಪರಸ್ಪರ ಸಮನ್ವಯ ಹೊಂದಿವೆಯೋ ಅಥವಾ ಭಿನ್ನವಾಗಿವೆಯೋ ಎಂದು ನೋಡಬೇಕು. ಒಬ್ಬನ ಮಾತು ಮತ್ತು ಕೃತ್ಯ ಸಮವಾಗದಿದ್ದರೆ ಅವನು ಅಲ್ಲಾಹನ ಕೋಪಕ್ಕೆ ಪಾತ್ರನಾಗುವನೆಂದು ತಿಳಿದುಕೊಳ್ಳಿರಿ. ಒಬ್ಬನ ಹೃದಯ ಕೊಳಕಾಗಿದ್ದರೆ, ಅವನ ಮಾತು ಎಷ್ಟು ಪರಿಶುದ್ಧವಾಗಿದ್ದರೂ ಅವನ ಹೃದಯಕ್ಕೆ ಅಲ್ಲಾಹನ ದೃಷ್ಟಿಯಲ್ಲಿ ಬೆಲೆಯಿಲ್ಲ. ಹೃದಯ ಕೊಳಕಾಗಿದ್ದರೆ ನಾವು ಎಷ್ಟು ಒಳ್ಳೆಯ ಮಾತು ಹೇಳಿದರೂ ಅಲ್ಲಾಹನ ದೃಷ್ಟಿಯಲ್ಲಿ ಅದಕ್ಕೆ ಯಾವುದೇ ಬೆಲೆ ಇಲ್ಲ. ಬದಲಾಗಿ ಅಲ್ಲಾಹನ ಕ್ರೋಧ ಪ್ರಜ್ವಲಿಸುವುದು. ಅಲ್ಲಾಹನು ಎಲ್ಲರನ್ನೂ ಅದರಿಂದ ರಕ್ಷಿಸಲಿ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನನ್ನ ಜಮಾಅತಿನ ಜನರು ಮನವರಿಕೆ ಮಾಡಿಕೊಳ್ಳಲಿ. ಅವರು ನನ್ನ ಬಳಿಗೆ ಬಂದುದು ಬೀಜ ಬಿತ್ತಲಿಕ್ಕಾಗಿದೆ. ಅದರ ಮೂಲಕ ಫಲವನ್ನು ನೀಡುವ ವೃಕ್ಷವಾಗಲಿಕ್ಕಾಗಿ ಪ್ರತಿಯೊಬ್ಬನು ತನ್ನ ಅಂತರಂಗ ಮತ್ತು ಬಹಿರಂಗ ಹೇಗಿದೆ ಎಂದು ಚಿಂತಿಸಬೇಕು. ನಮ್ಮ ಜಮಾಅತಿನವರು ನಾಲಗೆಯಲ್ಲಿ ಒಂದು, ಹೃದಯದಲ್ಲಿ ಮತ್ತೊಂದು ಎಂಬ ಸ್ಥಿತಿಯಲ್ಲಿದ್ದರೆ ಅಂತಿಮಗತಿ ಉತ್ತಮವಾಗಲಾರದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನಮ್ಮ ಜಮಾಅತಿನವರು ವಿಶಿಷ್ಟವಾಗಿ ತಖ್ವವನ್ನು ಹೊಂದಬೇಕು. ಯಾಕೆಂದರೆ ಅವರು ಅಲ್ಲಾಹನಿಂದ ನಿಯೋಜಿತನಾದವನೆಂದು ವಾದಿಸುವ ಓರ್ವನ ಕೈಯಲ್ಲಿ ಬೈಅತ್ ಮಾಡಿದ್ದಾರೆ. ಅವರು ಹಿಂದೆ ಅನೇಕ ವಿಧಗಳ ದ್ವೇಷ, ಅಸೂಯೆ, ಅಥವಾ ಶಿರ್ಕ್‌ನಲ್ಲಿ ಮುಳುಗಿದ್ದರೂ ಲೌಕಿಕ ವಾದಿಗಳಾಗಿದ್ದರೂ ಈ ಎಲ್ಲ ವಿಪತ್ತುಗಳಿಂದ ಮೋಕ್ಷಗಳಿಸಲಿಕ್ಕಾಗಿ ಅವರು ಈ ಮಾರ್ಗವನ್ನು ಸ್ವೀಕರಿಸಿದ್ದಾರೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನಿಮಗೆ ತಿಳಿದಿದೆ ಒಬ್ಬನು ರೋಗಿಯಾದರೆ ಅವನ ರೋಗ ಚಿಕ್ಕದಾದರೂ ದೊಡ್ಡದಾಗಿದ್ದರೂ ಅವನ ರೋಗಕ್ಕೆ ತಕ್ಕುದಾದ ಚಿಕಿತ್ಸೆ ನಡೆಸದಿದ್ದರೆ ಮತ್ತು ಅದಕ್ಕೋಸ್ಕರ ಕಷ್ಟಪಡದಿದ್ದರೆ ರೋಗಿಯು ರೋಗ ಮುಕ್ತನಾಗಲಾರನು. ಮುಖದಲ್ಲಿ ಒಂದು ಚಿಕ್ಕ ಕಪ್ಪು ಕಲೆ ತಲೆದೋರಿದರೂ ಬಹಳ ಚಿಂತೆ ಉಂಟಾಗುತ್ತದೆ. ಈ

ಕಪ್ಪು ಕಲೆ ವರ್ಧಿಸಿ ಮುಖವಿಡೀ ಕಪ್ಪಾಗುವ ಬಗ್ಗೆ ಚಿಂತಿಸುತ್ತಾರೆ. ಇದೇ ರೀತಿ ಪಾಪ ಸಹ ಒಂದು ಕಪ್ಪು ಕಲೆಯಾಗಿದೆ. ಚಿಕ್ಕ ಬೆಂಕಿ ದೊಡ್ಡದಾಗಿ ಪ್ರಜ್ವಲಿಸುತ್ತದೆ. ಚಿಕ್ಕ ಕಪ್ಪು ಕಲೆ ಬೆಳೆದು ಮುಖವಿಡೀ ಆವರಿಸುವ ರೀತಿಯಲ್ಲೇ ಚಿಕ್ಕ ಪಾಪಕೃತ್ಯಗಳು ದೊಡ್ಡ ಪಾಪಕೃತ್ಯಗಳಿಗೆ ಕಾರಣವಾಗುತ್ತವೆ. ಕೊನೆಗೆ ಅದು ಮನುಷ್ಯನನ್ನು ಕಪ್ಪಾಗಿ ಪರಿವರ್ತಿಸುತ್ತದೆ.

ನಮಗೆ ರಮಝಾನ್ ತಿಂಗಳ ಈ ವಿಶಿಷ್ಟ ವಾತಾವರಣದಲ್ಲಿ ಅಲ್ಲಾಹನ ಆಜ್ಞೆಗಳ ಪ್ರಕಾರ ತಖ್ವವನ್ನು ಹೊಂದುವ ಭಾಗ್ಯವನ್ನು ಅಲ್ಲಾಹನು ದಯಪಾಲಿಸಲಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜಮಾಅತಿಗೆ ಸೇರಿದ ನಾವು ಎಲ್ಲ ವಿಧಗಳ ಕೆಟ್ಟ ಕೆಲಸಗಳಿಂದ ನಮ್ಮನ್ನು ರಕ್ಷಿಸಿಕೊಳ್ಳುವವರಾಗಲಿ. ಅಲ್ಲಾಹನ ಸಂಪ್ರೀತಿ ಗಳಿಸಲು ನಮ್ಮ ಪ್ರತಿಯೊಂದು ಕೆಲಸವನ್ನು ಮಾಡುವವರಾಗಲಿ. ನಾವು ಈ ಪರಿಶುದ್ಧ ತಿಂಗಳಿನಿಂದ ಹೊರಗೆ ಬರುವಾಗ ನಾವು ಒಳಿತುಗಳಲ್ಲಿ ಹೇಗೆ ಸ್ಥಿರವಾಗಿ ನೆಲೆಗೊಳ್ಳಬೇಕೆಂದರೆ ನಾವು ಬಿಟ್ಟ ಕೆಲಸಗಳು ಅಥವಾ ನಮ್ಮಿಂದ ದೂರ ಸರಿದು ಹೋದ ಕೆಟ್ಟ ಕೆಲಸಗಳು ಮರಳಿ ನಮ್ಮ ಬಳಿಗೆ ಬಾರದಂತಾಗಲಿ. ಅಲ್ಲಾಹನು ನಮಗೆ ಈ ಭಾಗ್ಯ ದಯಪಾಲಿಸಲಿ – ಆಮೀನ್.

——————*****——————


***Friday Sermon delivered by Hadrath Khaleefatul Masih Al Khamis*** *(atba)*

*at Masjid Baithul Futhuh, London on 10-06-2016.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon